ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಜಿಲ್ಲಾಧಿಕಾರಿಗಳು ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಹಾಸನ ಜಿಲ್ಲೆ,
ಹಾಸನ _ 573 201
website: www.hassan.nic.in

ಕಛೇರಿ : 08172 – 267345.
265028, 253345.
ನಿವಾಸ : 08172 – 268202.
ಫ್ಯಾಕ್ಸ್ : 08172 – 265418.
E-mail: deo.hassan@gmail.com

ಸಂಖ್ಯೆ: ಗ್ರಾ.ಲೆ.ಸಿಬ್ಬಂದಿ– 79/2015–2016. ದಿನಾಂಕ: 06-07-2016

## –:: ಅಧಿಕೃತ ಜ್ಞಾಪನ ::–

**ವಿಷಯ:–** ಹಾಸನ ಜಿಲ್ಲಾ ಕಂದಾಯ ಇಲಾಖೆಯಲ್ಲಿ ಗ್ರಾಮಲೆಕ್ಕಿಗರಾಗಿ ಸೇವೆ ಸಲ್ಲಿಸುತ್ತಿರುವ ನೌಕರರ ಅಂತಿಮ ಜೇಷ್ಠತಾ ಪಟ್ಟಿ, ದಿನಾಂಕ: 01.01.2016 ರಲ್ಲಿರುವಂತೆ ಪ್ರಕಟಿಸುವ ಕುರಿತು.

**ಉಲ್ಲೇಖ:–** 1. ಈ ಕಛೇರಿಯ ಸಮ ಸಂಖ್ಯೆ ಅಧಿಕೃತ ಜ್ಞಾಪನ ದಿನಾಂಕ: 23–03–2016.
2. ತಹಸೀಲ್ದಾರ್, ಅರಸೀಕೆರೆ ತಾಲ್ಲೂಕು ಇವರ ಪತ್ರ ಸಂಖ್ಯೆ: ಸಿಬ್ಬಂದಿ 08/2016–17. ದಿನಾಂಕ: 28–04–2016.

––***––

ಹಾಸನ ಜಿಲ್ಲಾ ಕಂದಾಯ ಘಟಕದಲ್ಲಿ ಗ್ರಾಮಲೆಕ್ಕಿಗರ ಹಂಗಾಮಿ ಜೇಷ್ಠತಾ ಪಟ್ಟಿಯನ್ನು ದಿನಾಂಕ: 31.12.2015 ರ ಅಂತ್ಯಕ್ಕೆ ದಿನಾಂಕ: 01.01.2016 ರಲ್ಲಿರುವಂತೆ ಈ ಕಛೇರಿಯಲ್ಲಿ ಲಭ್ಯವಿರುವ ಮಾಹಿತಿಗಳ ಆಧಾರದ ಮೇಲೆ ಉಲ್ಲೇಖ (1) ರನ್ವಯ ಪ್ರಕಟಿಸಲಾಗಿರುತ್ತದೆ. ಸದರಿ ಹಂಗಾಮಿ ಜೇಷ್ಠತಾ ಪಟ್ಟಿಯನ್ನು ಸಂಬಂಧಿಸಿದ ನೌಕರರ ಗಮನಕ್ಕೆ ಕಛೇರಿ ಮುಖ್ಯಸ್ಥರು ತರಲು ಸೂಚಿಸಲಾಗಿತ್ತು.

ಸಂಬಂಧಿಸಿದ ನೌಕರರು ತಮ್ಮ ಹೆಸರು, ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ ಇತ್ಯಾದಿ ವಿವರಗಳು ತಪ್ಪಾಗಿದ್ದಲ್ಲಿ ಅಥವಾ ಹೆಸರುಗಳು ಕೈಬಿಟ್ಟು ಹೋಗಿದ್ದಲ್ಲಿ ಆಕ್ಷೇಪಣೆಗಳನ್ನು ಹಂಗಾಮಿ ಜೇಷ್ಠತಾ ಪಟ್ಟಿ ಪ್ರಕಟಣೆಯಾದ 30 ದಿನಗಳೊಳಗಾಗಿ ಕಛೇರಿ ಮುಖ್ಯಸ್ಥರ ಮುಖಾಂತರ ಸಲ್ಲಿಸುವಂತೆ ತಿಳಿಸಿ, ಕಛೇರಿ ಮುಖ್ಯಸ್ಥರು ನೌಕರರು ನೀಡಿದ ಆಕ್ಷೇಪಣೆಗಳನ್ನು ಅವರುಗಳ ಮೂಲ ಸೇವಾವಹಿ ದಾಖಲೆಗಳೊಂದಿಗೆ ಪರಿಶೀಲಿಸಿ ಆಕ್ಷೇಪಣೆ ಸೂಕ್ತವೆನಿಸಿದಲ್ಲಿ ಅಭಿಪ್ರಾಯದೊಡನೆ ಈ ಕಛೇರಿಗೆ ಸಲ್ಲಿಸಲು ತಿಳಿಸಿ, ಹಂಗಾಮಿ ಜೇಷ್ಠತಾ ಪಟ್ಟಿ ಪ್ರಕಟಣೆಯಾದ ಮೂವತ್ತು ದಿನಗಳ ಒಳಗಾಗಿ ಜೇಷ್ಠತಾ ಪಟ್ಟಿ ಕುರಿತು ಆಕ್ಷೇಪಣೆಗಳು ಬಾರದಿದ್ದಲ್ಲಿ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಭಾವಿಸಿ 1957 ರ ಕರ್ನಾಟಕ ಸರ್ಕಾರಿ ನೌಕರರ ಜೇಷ್ಠತಾ ನಿಯಮಾವಳಿ ಪ್ರಕಾರ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಸೂಚಿಸಲಾಗಿತ್ತು.

–ಮು.ತಿ.ನೋ.–

ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದಂತೆ ಜಿಲ್ಲೆಯ ಇಬ್ಬರು ಗ್ರಾಮಲೆಕ್ಕಿಗರಿಂದ ಮನವಿಗಳು ಬಂದಿದ್ದು, ಸದರಿ ಮನವಿಗಳ ವಿವರ ಈ ಕೆಳಗಿನಂತಿರುತ್ತದೆ.

1. ಶ್ರೀ ಮೋಹನ್ ಕುಮಾರ್, ಗ್ರಾಮಲೆಕ್ಕಿಗರ ದಿನಾಂಕ: 04/07/2015 ರಂದು ಮನವಿಯನ್ನು ಸಲ್ಲಿಸಿ ಹಾಲಿ ಸದರಿಯವರು ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಇಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು, ಇವರ ಹೆಸರು ಹಾಸನ ಜಿಲ್ಲೆಯ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಯಲ್ಲಿ ಕೈಬಿಟ್ಟಿದ್ದು, ಸೇರಿಸಿ ಕೊಡಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ದಿನಾಂಕ: 01/01/2007 ರಲ್ಲಿದ್ದಂತೆ ಪ್ರಕಟಿಸಲಾದ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ಸದರಿಯವರ ಹೆಸರಿ ಕ್ರ.ಸಂ. 663 ರಲ್ಲಿರುತ್ತದೆ. ಈ ಹಿಂದೆ ದಿನಾಂಕ: 01/01/2012 ರಲ್ಲಿದ್ದಂತೆ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಯನ್ನು ತಯಾರಿಸುವ ಸಮಯದಲ್ಲಿ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಕಾರ್ಯ ನಿರ್ವಹಿಸುತ್ತಿರುವ ಎಲ್ಲಾ ಗ್ರಾಮಲೆಕ್ಕಿಗರ ಸೇವಾ ವಹಿಗಳನ್ನು ಪರಿಶೀಲಿಸಿ, ಎಲ್ಲಾ ತಾಲ್ಲೂಕುಗಳಿಂದ ವರದಿಗಳನ್ನು ಪಡೆದು ಜೇಷ್ಠತಾ ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಈ ಸಮಯದಲ್ಲಿ ಸದರಿ ನೌಕರರು ಇತರೆ ಜಿಲ್ಲೆಯಲ್ಲಿ ನಿಯೋಜನೆ ಮೇರೆ ಕಾರ್ಯ ನಿರ್ವಹಿಸುತ್ತಿದ್ದ ಕಾರಣ ಹಾಗೂ ಈ ಜಿಲ್ಲೆಯ ಯಾವುದೇ ತಾಲ್ಲೂಕುಗಳಿಂದ ಸದರಿ ನೌಕರರು ಈ ಜಿಲ್ಲೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ವರದಿ ನೀಡದ ಕಾರಣ, ದಿನಾಂಕ: 01/01/2012 ರಲ್ಲಿದ್ದಂತೆ ಪ್ರಕಟಿಸಲಾದ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಅಂತಿಮ ಜೇಷ್ಠತಾ ಪಟ್ಟಿಗೆ ಸಂಬಂಧಿಸಿದ ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಗ್ರಾ.ಲೆ.ಸಿಬ್ಬಂದಿ-25/2011-12. ದಿನಾಂಕ: 24/11/2012 ರಲ್ಲಿ **"ಎಲ್ಲಾ ಪರಿಶೀಲನೆಗಳ ನಂತರ ಕ್ರಮ ಸಂಖ್ಯೆ 620 ರಲ್ಲಿನ ಎ.ಮೋಹನ್ ಕುಮಾರ್ ಇವರ ಹೆಸರು ಮತ್ತು ವಿವರಗಳು ಕ್ರ.ಸಂ. 621 ರಲ್ಲಿ ಮೋಹನ್ ಕುಮಾರ್ ಎಂದು ಪುನಹ ನಮೂದಾಗಿದ್ದು, ಹೀಗೆ ಎರಡು ಬಾರಿ ನಮೂದಾಗಿರುವುದರಿಂದ ಇವುಗಳಲ್ಲಿ ಒಂದನ್ನು ಕೈಬಿಡಲಾಗಿದೆ"** ಎಂದು ದಾಖಲಿಸಿ ಇವರ ಹೆಸರನ್ನು ಕೈಬಿಡಲಾಗಿರುತ್ತದೆ. ಆದರೆ ವಾಸ್ತವವಾಗಿ ಈ ಇಬ್ಬರೂ ಮೋಹನ್ ಕುಮಾರ್ ರವರುಗಳು ಬೇರೆ ಬೇರೆ ನೌಕರರೇ ಆಗಿರುತ್ತಾರೆ. ಸದರಿ ನೌಕರರು ಅವರ ಹೆಸರನ್ನು ಜೇಷ್ಠತಾ ಪಟ್ಟಿಗೆ ಸೇರಿಸಿಕೊಡಬೇಕಾಗಿ ಮನವಿಯನ್ನು ಸಲ್ಲಿಸಿದ್ದು, ಈ ನೌಕರರು ಮೂಲತಃ ಹಾಸನ ಜಿಲ್ಲೆಯ ಗ್ರಾಮಲೆಕ್ಕಿಗರಾಗಿದ್ದು, ನಿಯೋಜನೆ ಮೇರೆಗೆ ಬೆಂಗಳೂರು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಇವರ ಹೆಸರನ್ನು ಜೇಷ್ಠತಾ ಪಟ್ಟಿಗೆ ಸೇರಿಸಬೇಕಿದ್ದು, ದಿನಾಂಕ: 01/01/2012 ರಲ್ಲಿದ್ದಂತೆ ತಯಾರಿಸಿರುವ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಗೆ ತಿದ್ದುಪಡಿ ಮಾಡಿ ಸದರಿ ನೌಕರರ ಹೆಸರನ್ನು ಕ್ರ.ಸಂ. 668(ಎ) ರಲ್ಲಿ ಈ ಕೆಳಗಿನಂತೆ ಸೇರಿಸಿರುತ್ತದೆ.

| ಕ್ರ. ಸಂ. | ಜೇಷ್ಠತಾ ಪಟ್ಟಿಯ ಕ್ರ.ಸಂ. | ನೌಕರರ ಹೆಸರು | ಹುದ್ದೆ | ಜನ್ಮ ದಿನಾಂಕ | ಸೇವೆಗೆ ಸೇರಿದ ದಿನಾಂಕ. (ಆದೇಶದ ದಿನಾಂಕ) | ವರ್ಗಾವಣೆ/ಬಡ್ತಿ ಹೊಂದಿದ ದಿನಾಂಕ/ನೇಮಕಾತಿ ಹೊಂದಿದ ದಿನಾಂಕ | | ನೇರ ನೇಮಕಾತಿ / ಬಡ್ತಿ | ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ | ಷರಾ |
|---|---|---|---|---|---|---|---|---|---|---|
| | | | | | | ವಾಸ್ತವಿಕ | ಅರ್ಹತಾ | | | |
| 1 | 668(ಎ) | ಮೋಹನ್ ಕುಮಾರ್ | ಗ್ರಾಮಲೆಕ್ಕಿಗರು | 20.07.1977 | 12.12.1996 | 19.12.1996 | 12.12.1996 | ನೇ.ನೇ. | ಇತರೆ | ಅನುಕಂಪದ ಆಧಾರದ ನೇಮಕಾತಿ. |

2. ಶ್ರೀ ಕುಮಾರ ಡಿ., ಗ್ರಾಮಲೆಕ್ಕಿಗರು, ಹಾಸನ ತಾಲ್ಲೂಕು ಇವರು ತಹಸೀಲ್ದಾರರ ಮೂಲಕ ಮನವಿಯನ್ನು ಸಲ್ಲಿಸಿ, ಅವರು ಪರಿಶಿಷ್ಟ ಜಾತಿಗೆ ಸೇರಿದ್ದು, ಜೇಷ್ಠತಾ ಪಟ್ಟಿಯಲ್ಲಿ ಇತರೆ ಎಂದು ನಮೂದಾಗಿರುತ್ತದೆಂದು, ಅದನ್ನು ಪರಿಶಿಷ್ಟ ಜಾತಿ ಎಂದು ಸರಿಪಡಿಸಿಕೊಡಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ತಹಸೀಲ್ದಾರ್, ಹಾಸನ ತಾಲ್ಲೂಕು ಇವರು ನೌಕರರ ಜಾತಿ ಪ್ರಮಾಣ ಪತ್ರವನ್ನು ಹಾಗೂ ಮೂಲ ಸೇವಾ ವಹಿಯೊಂದಿಗೆ ವರದಿಯನ್ನು ನೀಡಿ ಸದರಿ ನೌಕರರು ಪರಿಶಿಷ್ಟ ಜಾತಿಯ ಆದಿಕರ್ನಾಟಕ ಜಾತಿಗೆ ಸೇರಿರುವುದರಿಂದ ಜೇಷ್ಠತಾ ಪಟ್ಟಿಯಲ್ಲಿ ಜಾತಿಯನ್ನು ಸರಿಪಡಿಸಿ ಕೊಡಬೇಕಾಗಿ ಕೋರಿರುತ್ತಾರೆ. ಈ ಬಗ್ಗೆ ಪರಿಶೀಲಿಸಲಾಗಿ ಈ ನೌಕರರ ಹೆಸರು

ಮತ್ತು ವಿವರಗಳು ದಿನಾಂಕ: 01/01/2012 ರಲ್ಲಿದ್ದಂತೆ ತಯಾರಿಸುವ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಯ ಕ್ರ.ಸಂ. 889 ರಲ್ಲಿರುತ್ತದೆ. ನೌಕರರ ಮನವಿಯನ್ನು ಪರಿಗಣಿಸಿ ದಿನಾಂಕ: 01/01/2012 ರಲ್ಲಿದ್ದಂತೆ ತಯಾರಿಸಿರುವ ಹಾಸನ ಜಿಲ್ಲೆಯಲ್ಲಿನ ಗ್ರಾಮಲೆಕ್ಕಿಗರ ಜೇಷ್ಠತಾ ಪಟ್ಟಿಗೆ ಈ ಕೆಳಕಂಡಂತೆ ತಿದ್ದುಪಡಿ ಮಾಡಲಾಗಿದೆ.

| ಕ್ರ.ಸಂ. | ಜೇಷ್ಠತಾ ಪಟ್ಟಿಯ ಕ್ರ.ಸಂ. | ನೌಕರರ ಹೆಸರು | ಜೇಷ್ಠತಾ ಪಟ್ಟಿಯಲ್ಲಿ ಹಾಲಿ ಇರುವುದು | ತಿದ್ದುಪಡಿ ಮಾಡಿರುವುದು |
|---|---|---|---|---|
| 1 | 889 | ಡಿ.ಕುಮಾರ | ಡಿ.ಕುಮಾರ (ಇತರೆ) | ಡಿ.ಕುಮಾರ (ಪರಿಶಿಷ್ಟ ಜಾತಿ) |

ಅದರಂತೆ ಅರಸೀಕೆರೆ ತಾಲ್ಲೂಕಿನ ನಾಲ್ಕು ಗ್ರಾಮಲೆಕ್ಕಿಗರನ್ನು ಹೊರತುಪಡಿಸಿ ಉಳಿದ ಯಾವುದೇ ತಾಲ್ಲೂಕಿನಿಂದ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. ಉಲ್ಲೇಖ (2) ರ ಪತ್ರದನ್ವಯ ಕ್ರಮ ಸಂಖ್ಯೆ 1100, 1109, 1113 ಮತ್ತು 1116 ರಲ್ಲಿನ ನೌಕರರು ಆಕ್ಷೇಪಣೆ ಸಲ್ಲಿಸಿ ಕ್ರಮವಾಗಿ ಅವರ ಹೆಸರು ತಪ್ಪಾಗಿರುವುದಾಗಿ ತಿಳಿಸಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಆಕ್ಷೇಪಣೆಯನ್ನು ಅವರುಗಳ ಕೋರಿಕೆಯಂತೆ ನಿಯಮಾನುಸಾರ ಸರಿಪಡಿಸಿರುತ್ತದೆ. ಗ್ರಾಮಲೆಕ್ಕಿಗರ ಅರ್ಹತಾ/ವಾಸ್ತವಿಕ ದಿನಾಂಕಗಳು ನೇಮಕಾತಿ ಆದೇಶದ ದಿನಾಂಕವಾಗಿದ್ದು, ಸೇವೆಗೆ ಸೇರಿದ ದಿನಾಂಕವು ಆಯಾ ಗ್ರಾಮಲೆಕ್ಕಿಗರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ದಿನಾಂಕಗಳಂತೆ ಪ್ರಕಟಿಸಬೇಕಾಗಿದ್ದು, ಅದರಂತೆ ಗ್ರಾಮಲೆಕ್ಕಿಗರು ಸೇವೆಗೆ ಸೇರಿದ ದಿನಾಂಕವನ್ನು ಸರಿಪಡಿಸಿರುತ್ತದೆ. ಹಾಗೂ ದಿನಾಂಕ: 01/01/2016 ರಲ್ಲಿದ್ದಂತೆ ಗ್ರಾಮಲೆಕ್ಕಿಗರ ವೃಂದದ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಿ ಆದೇಶಿಸಿದೆ.

ಈ ಕೂಡ ಲಗತ್ತಿರುವ ಅಂತಿಮ ಜೇಷ್ಠತಾ ಪಟ್ಟಿಯನ್ನು ಕಛೇರಿ ಮುಖ್ಯಸ್ಥರು ಸಂಬಂಧಪಟ್ಟ ಎಲ್ಲಾ ಗ್ರಾಮಲೆಕ್ಕಿಗರ ಗಮನಕ್ಕೆ ತರಲು ಸೂಚಿಸಿದೆ.

(ಉಮೇಶ್ ಹೆಚ್. ಕುಸುಗಲ್)
ಜಿಲ್ಲಾಧಿಕಾರಿ,
ಹಾಸನ ಜಿಲ್ಲೆ, ಹಾಸನ

ಪ್ರತಿಗಳನ್ನು ಈ ಕೆಳಕಂಡವರುಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ,

1) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ, ವಿಧಾನ ಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2) ಪ್ರಾದೇಶಿಕ ಆಯುಕ್ತರು, ಮೈಸೂರು ವಿಭಾಗ, ಮೈಸೂರುರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
3) ಉಪವಿಭಾಗಾಧಿಕಾರಿಗಳು, ಹಾಸನ / ಸಕಲೇಶಪುರ ಇವರಿಗೆ.
4) ತಹಸೀಲ್ದಾರ್, ಹಾಸನ/ಚನ್ನರಾಯಪಟ್ಟಣ/ಹೊಳೆನರಸೀಪುರ/ಅರಸೀಕೆರೆ/ಸಕಲೇಶಪುರ/ಅರಕಲಗೂಡು/ಬೇಲೂರು/ಆಲೂರು ತಾಲ್ಲೂಕು. ಹಾಸನ ಇವರಿಗೆ.
5) ಕಛೇರಿ ಕಡತಕ್ಕೆ.